ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಬಸವನಗುಡಿಯ ಶ್ರೀ ರಾಘವೇಂದ್ರ ಸಹಕಾರಿ ಬ್ಯಾಂಕ್ ಅವ್ಯವಹಾರ ಕುರಿತು

ಡಾ. ತೇಜಸ್ವಿನಿ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು) -

91 (784) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಬೆಂಗಳೂರಿನ ಬಸವನಗುಡಿಯಲ್ಲಿರುವ ಶ್ರೀ ರಾಘವೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಸುಮಾರು 450 ಕೋಟಿ ಮೌಲ್ಯದ ಬೃಹತ್ ಅವ್ಯವಹಾರ ನಡೆದಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬೃಹತ್ ಅವ್ಯವಹಾರದಲ್ಲಿ ತೊಂದರೆಗೀಡಾಗಿರುವ ಠೇವಣಿದಾರರ ಸಂಖ್ಯೆ ಎಷ್ಟು ಹಾಗೂ ಪರಿಸ್ಥಿತಿಯನ್ನು ವಿವರಿಸುವುದು;

(ಇ) ಅವ್ಯವಹಾರದ ಸಂಪೂರ್ಣ ತನಿಖೆಗೆ ಯಾವ ಕ್ರಮ ವಹಿಸಲಾಗಿದೆ; ಯಾವ ತನಿಖಾ ಸಂಸ್ಥೆ ತನಿಖೆ ಕೈಗೊಂಡಿದೆ; ಇದರ ಫಲಿತಾಂಶವೇನು;

(ಈ) ಠೇವಣಿದಾರರಿಗೆ ಎಷ್ಟು ಕಾಲಮಿತಿಯೊಳಗೆ ಹಣ ಹಿಂತಿರುಗಿಸಲು ಕ್ರಮ ವಹಿಸಲಾಗಿದೆ? (ಅವ್ಯವಹಾರ ಆರೋಪಿಗಳ ವಿವರ ಹಾಗೂ ಅವ್ಯವಹಾರದ ಸ್ವರೂಪದ ಬಗೆಗಿನ ಪೂರ್ಣ ಮಾಹಿತಿ ಒದಗಿಸುವುದು)